ಇಂಗ್ಲೀಷ್ ಸ್ಕೂಲ್‌ಗೆ ಪರ್ಮೀಷನ್ ಕೊಡಬೇಕೆನ್ನುವುದು 6 ವರ್ಷಗಳಿಂದ ಪೆಂಡಿಂಗ್ ಇದೆ. ಬೇರೆ ವಿಷಯಗಳ ಬಗ್ಗೆಯಾದರೆ 24 ಗಂಟೆಗಳಲ್ಲಿ ಆರ್ಡರ್ ಆಗುತ್ತವೆ. ಇದು ಏಕೆ 6 ವರ್ಷಗಳಿಂದ ಪೆಂಡಿಗ್ ಇದೆ? ಆಗುತ್ತದೆ ಎಂದು ಹೇಳಿ, ಇಲ್ಲವೇ ಆಗುವುದಿಲ್ಲ ಎಂದು ಹೇಳಿ.

ಅಧ್ಯಕ್ಷರು : ತಮ್ಮ ಎರಡನೇ ಪ್ರಶ್ನೆಗೆ Decision will be taken shortly ಎಂದು ಇದೆ.

ಶ್ರೀ ಸಾದತ್ ಅಲಿ ಖಾನ್ : ಶಾರ್ಟ್‌ಲಿ ಎಂದರೆ ಯಾವಾಗ ? This question is coming up from the last 6 years. What is the definition of shortly?

ಅಧ್ಯಕ್ಷರು : ಶಾರ್ಟ್‌ಲಿ ಎಂದರೆ ಏನು? Hon. Minister will define as to what is shortly.

ಶ್ರೀ ಎಂ. ವೀರಪ್ಪ ಮೊಯಿಲಿ : ಶಾರ್ಟ್‌ಲಿ ಎಂದರೆ not in the distant time.

SRI SADATH ALI KHAN :The definition of shortly means, whether it is one year, two years, three years or six years. Please tell me.

MR. SPEAKER : By the end of the Century.

ಶ್ರೀ ಸಾದತ್ ಅಲಿಖಾನ್ : ಅಲ್ಲಿಯವರೆಗೆ ಆ ಮಕ್ಕಳು ಏನಾಗಬೇಕು? Sir, I had asked for the question of granting permission to English Medium Schools on natural growth basis.

MR. SPEAKER : He has already answered to your question. He has meet your point.

ಶೈಕ್ಷಣಿಕ ವರ್ಷದಲ್ಲಿ ಕನ್ನಡ ವಿಶ್ವವಿದ್ಯಾನಿಲಯದ ಸ್ಥಾಪನೆ

2376 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಇತಿಹಾಸ ಪ್ರಸಿದ್ಧ ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಉದ್ದೇಶಿದೆಯೇ?

ಆ) ಇದಕ್ಕಾಗಿ ಸರ್ಕಾರ ಯಾವ ಯಾವ ಪೂರ್ವ ಭಾವಿ ಸಿದ್ಧತೆಗಳನ್ನು ಮಾಡಿದೆ?

ಇ) ಪೂರ್ವ ಸಿದ್ಧತೆಯ ಸಲುವಾಗಿ ವಿಶೇಷ ಅಧಿಕಾರಿಯನ್ನು ನೇಮಿಸುವ ಬಗ್ಗೆ ಸರ್ಕಾರ ನಿರ್ಣಯಿಸಿದೆಯೇ?

ಈ) ಹಾಗಿದ್ದಲ್ಲಿ ಈ ವಿಷಯದಲ್ಲಿ ಅಧಿಕೃತ ಆಜ್ಞೆ ಹೊರ ಬಿದ್ದಿದೆಯೇ?

ಉ) ಸರ್ಕಾರ ಈ ವಿಷಯದಲ್ಲಿ ವಿಳಂಬ ನೀತಿಯನ್ನು ಅನುಸರಿಸುತ್ತಿರಲು ಕಾರಣಗಳೇನು?

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ಸಚಿವರು) :

ಅ) ಹೌದು

ಆ) ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಪೂರ್ವ ಭಾವಿಯಾಗಿ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ಮತ್ತು ದಿನಾಂಕ 21-5-91 ರಂದು ಅಧಿಸೂಚನೆಯನ್ನು ಹೊರಡಿಸಿದೆ.

ಪ್ರಸಕ್ತ ಸಾಲಿನಲ್ಲಿ ಈ ಉದ್ದೇಶಕ್ಕಾಗಿ ರೂ.80.00 ಲಕ್ಷಗಳನ್ನು ಯೋಜನೆಯಡಿಯಲ್ಲಿ ಒದಗಿಸಲಾಗಿದೆ.

ಇ) ಹೌದು

ಈ) ಇಲ್ಲ

ಉ) ಉದ್ಭವಿಸುವುದಿಲ್ಲ

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮಂತ್ರಿಗಳು ಹಂಪೆಯಲ್ಲಿ ಕನ್ನಡ ವಿಶ್ವವಿದ್ಯಾನಿಲಯವನ್ನೂ ಸ್ಥಾಪನೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಸಂತೋಷ. ಇದರ ಬಗ್ಗೆ ಒಂದು ಕಾನೂನು ಆಗಿದೆ. ಈ ಕನ್ನಡ ವಿಶ್ವವಿದ್ಯಾನಿಲಯ ಆದಷ್ಟು ಬೇಗನೆ ಆಗಬೇಕಾಗಿದೆ. ಸರ್ಕಾರ ಇದನ್ನು ಯಾವಾಗ ಶುರುಮಾಡುತ್ತದೆ? ಎರಡನೇಯ ಪ್ರಶ್ನೆ ಏನೆಂದರೆ ಆದಕ್ಕಾಗಿ ಬಜೆಟ್ ಪ್ರಾವಿಷನ್ ಕೇವಲ 80 ಲಕ್ಷ ಅಷ್ಟೇ ಮಾಡಿದ್ದಾರೆ. ಇದು ಸಾಲದು. ಇದನ್ನು ಹೆಚ್ಚು ಮಾಡಬೇಕಾಗುತ್ತದೆ. ಮೂರನೆಯದು, ಈ ಯೂನಿವರ್ಸಿಟಿ ಶುರು ಆಗಬೇಕಾದರೆ ಒಬ್ಬ ಸ್ಪೆಷಲ್ ಆಫೀಸರ್‌ನ್ನು ನೇಮಕ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಇದರ ಬಗ್ಗೆ ಯಾವುದೇ ನೋಟಿಫಿಕೇಷನ್ ಹೊರಡಿಸಿಲ್ಲ. ಎಲ್ಲಿಯತನಕ ಸ್ಪೆಷಲ್ ಆಫೀಸರನ್ನು ನೇಮಕ ಮಾಡುವುದಿಲ್ಲವೋ ಅಲ್ಲಿಯತನಕ ಯಾವುದೇ ಚಟುವಟಿಕೆಗಳನ್ನು ಮಾಡುವುದಕ್ಕೆ ಸಾಧ್ಯ ಆಗುವುದಿಲ್ಲ ಮತ್ತು ಅದಕ್ಕೆ ಯಾವುದೇ ಚಾಲನೆ ಕೂಡ ಸಿಗುವುದಿಲ್ಲ. ಆದುದರಿಂದ ಇದನ್ನು ಯಾವಾಗ ಮಾಡುತ್ತೀರಿ ಎಂದು ನಾನು ನಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುತ್ತಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಕನ್ನಡ ವಿಶ್ವವಿದ್ಯಾನಿಲಯವನ್ನು ನಾನು ಏನು ಮಾಡುತ್ತಿದ್ದೇವೆ, ಇದಕ್ಕೆ 8ನೇ ಪಂಚವಾರ್ಷಿಕ ಯೋಜನೆ ಯಡಿಯಲ್ಲಿ ಸುಮಾರು 4 ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ನಾನು ನಿರ್ಣಯ ಮಾಡಿದ್ದೇವೆ. ಈ ವರ್ಷ ಅಂದರೆ 1991-92ನೇ ಸಾಲಿನಲ್ಲಿ ನಾವು 80 ಲಕ್ಷ ರೂಪಾಯಿಗಳನ್ನು ಈಗಾಗಲೇ ಬಜೆಟ್‌ನಲ್ಲಿ ಒದಗಿಸಿದ್ದೇವೆ. ಬಹುಶಃ ನಮ್ಮ ಕಾರ್ಯಕ್ರಮವಾಗಿ ತಡವಾಗಿ ಪ್ರಾರಂಬವಾಗುವುದಿದ್ದರೆ 80 ಲಕ್ಷ ರೂಪಾಯಿಗಳು ಈ ವರ್ಷಕ್ಕೆ ಸಾಕು. ಬರುವ ವರ್ಷದಕಾರ್ಯಕ್ರಮದ ವ್ಯಾಪ್ತಿಯನ್ನು ನೋಡಿಕೊಂಡು ನಾವು ಹೆಚ್ಚು ಹಣ ಒದಗಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಈಗಾಗಲೇ ತಾವು ಈ ಮಸೂದೆಯಗೆ ಇಲ್ಲಿ ಮಂಜೂರಾತಿ ಕೊಟ್ಟಿದೆ. ಮಾನ್ಯ ರಾಜ್ಯಪಾಲರ ಒಪ್ಪಿಗೆ ಕೂಡ ಸಿಕ್ಕಿ ದಿನಾಂಕ 21.5.91ರಲ್ಲಿ ಅದಿಸೂಚನೆಯನ್ನು ಕೂಡ ಹೊರಡಿಸಲಾಗಿದೆ. ಈಗ ಅಸ್ತಿತ್ವದಲ್ಲಿ ಬರುವ ಕನ್ನಡ ವಿಶ್ವವಿದ್ಯಾನಿಲಯದ ಪ್ರಾರಂಭಿಕ ಕೆಲಸಗಳನ್ನು ಬಹು ಸಮರ್ಪಕವಾಗಿ ನಿರ್ವಹಿಸುವುದಕ್ಕೆ ವಿಶೇಷ ಅಧಿಕಾರಿ ಹುದ್ದೆಯನ್ನು ಸೃಜಿಸಬೇಕೆಂದು ನಾವು ಶಿಕ್ಷಣ ಇಲಾಖೆಯಿಂದ ನಿರ್ಣಯ ಮಾಡಿ ಯೋಜನಾ ಇಲಾಖೆಗೆ ಕಳಿಸಿ ಅವರು ಕೂಡ ಒಪ್ಪಿ ನಂತರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಕಳಿಸಿ ಅವರು ಕೂಡ ಒಪ್ಪಿಗೆ ಕೊಟ್ಟಿದ್ದಾರೆ. ಬಹುಶಃ ಸಧ್ಯದಲ್ಲೇ ವಿಶೇಷ ಅಧಿಕಾರಿಯ ನೇಮಕವಾಗುತ್ತದೆ.

ಶಾಲಾ ಮಕ್ಕಳಿಗೆ ಉಚಿತ ಸಮವಸ್ತ್ರಗಳು

2131 - ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 1990-91ನೇ ಸಾಲಿನಲ್ಲಿ ಎಷ್ಟು ಜನ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ಮಕ್ಕಳಿಗೆ ಉಚಿತವಾಗಿ ಸಮವಸ್ತ್ರ ಹಾಗೂ ಪಠ್ಯಪುಸ್ತಕಗಳನ್ನು ಹಂಚಲಾಗಿದೆ?